


# ದಾವಣಗೆರೆಯಲ್ಲಿ ರಾಮಕೃಷ್ಣ ಮಿಷನ್ ಆಶ್ರಮದ ಉದ್ಘಾಟನೆ

ಶ್ರೀರಾಮಕೃಷ್ಣ ಪರಮಹಂಸರ ೧೮೩ನೇ ಜಯಂತಿಯ ಶುಭ ಸಂದರ್ಭದಲ್ಲಿ **ದಾವಣಗೆರೆ ಶ್ರೀರಾಮಕೃಷ್ಣ ಆಶ್ರಮವನ್ನು** ರಾಮಕೃಷ್ಣ ಮಹಾಸಂಘಕ್ಕೆ ಹಸ್ತಾಂತರಿಸುವ ಮೂಲಕ ರಾಮಕೃಷ್ಣ ಮಿಷನ್ ಆಶ್ರಮ, ದಾವಣಗೆರೆ ಇದರ ಉದ್ಘಾಟನಾ ಕಾರ್ಯಕ್ರಮವು ನಡೆಯಿತು. ಈ ಮೂಲಕ **'ರಾಮಕೃಷ್ಣ ಮಿಷನ್ ಆಶ್ರಮ, ದಾವಣಗೆರೆ'**ಯು ರಾಮಕೃಷ್ಣ ಮಠ ಮತ್ತು ಮಿಷನ್, ಪ್ರಧಾನ ಕೇಂದ್ರ, ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ ಇದರ **ಕರ್ನಾಟಕ**ದಲ್ಲಿನ ೮ನೇ ಶಾಖಾಕೇಂದ್ರವಾಗಿ ಸೇರ್ಪಡೆಗೊಂಡು, ಈಗಾಗಲೇ ಕಟ್ಟಡ ನಿರ್ಮಾಣ ಹಾಗೂ ಇನ್ನಿತರ ಸೇವಾಕಾರ್ಯಗಳನ್ನು ಆರಂಭಿಸಲಾಗಿದೆ.

ಶ್ರೀರಾಮಕೃಷ್ಣರ ಜಯಂತಿಯ ಸಂದರ್ಭದಲ್ಲಿ ನಡೆದ ವಿಶೇಷ ಪೂಜೆ, ಶ್ರೀರಾಮಕೃಷ್ಣ ಹೋಮ ಇವುಗಳ ನಂತರ ದಾವಣಗೆರೆ ಶ್ರೀರಾಮಕೃಷ್ಣ ಆಶ್ರಮವನ್ನು ರಾಮಕೃಷ್ಣ ಮಹಾಸಂಘಕ್ಕೆ ಹಸ್ತಾಂತರಿಸುವ ಕಾರ್ಯಕ್ರಮ ನಡೆಯಿತು. ದಾವಣಗೆರೆ ಮಿಷನ್ ಆಶ್ರಮದ ಕಾರ್ಯದರ್ಶಿಗಳಾಗಿ ನಿಯುಕ್ತರಾದ ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಸಹಾಯಕರಾಗಿ ನಿಯುಕ್ತರಾದ ಸ್ವಾಮಿ ತ್ಯಾಗೀಶ್ವರಾನಂದಜಿ, ರಾಮಕೃಷ್ಣ ಮಹಾಸಂಘದ ಇತರ ಸಂನ್ಯಾಸಿಗಳು, 'ದಾವಣಗೆರೆ ಶ್ರೀರಾಮಕೃಷ್ಣ ಆಶ್ರಮ'ದ ಹಿಂದಿನ ಪದಾಧಿಕಾರಿಗಳಾದ ಶ್ರೀರಮೇಶ್ ಬಾಬು, ಬ್ರಹ್ಮಚಾರಿ ಹೇಮಂತ ಕುಮಾರ್, ಶ್ರೀ ಶಾಂತಿನಾಥ, ಶ್ರೀ ಗೋವಿಂದಪ್ಪ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಾರಾಯಣ ಸೇವೆ, ಜೀವಂತ ದುರ್ಗಾ ಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಇತರ ಶಾಲಾ ಸಾಮಗ್ರಿಗಳನ್ನು ಹಂಚುವ ಕಾರ್ಯಕ್ರಮಗಳು ನಡೆದವು. ಶ್ರೀರಾಮಕೃಷ್ಣರ ಜನ್ಮ ಮಹೋತ್ಸವದ ಆಚರಣೆಯ ಪ್ರಯುಕ್ತ ಸುಮಾರು ೧೫೦೦ಕ್ಕೂ ಹೆಚ್ಚು ಮಂದಿ ಭಕ್ತರು ಆಶ್ರಮದಲ್ಲಿ ಪ್ರಸಾದ ಸ್ವೀಕರಿಸಿದರು.




